ಶ್ರೀ ಎಂ.ಸಿ. ನಾಣಯ್ಯ (ಕಾನೂನು, ಸಂಸದೀಯ ವ್ಯವಹಾರಗಳು, ವಾರ್ತಾ ಮತ್ತು ಪ್ರಚಾರ ಇಲಾಖೆ ಮಂತ್ರಿಗಳು) : ಈಗ ಲಿಖಿತ ಮೂಲಕ ಉತ್ತರಿಸುವ 36 ಪ್ರಶ್ನೆಗಳ ಪೈಕಿ 32 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳು

ಲಾಕಪ್‌ಗಳಲ್ಲಿ ಸತ್ತಿರುವ ಬಗ್ಗೆ

232 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜನವರಿ 1995 ರಿಂದ ಮಾರ್ಚ್ 10 ರವರೆಗೆ ಪೋಲೀಸ್ ಠಾಣೆಗಳ ಲಾಕಪ್‌ಗಳಲ್ಲಿ ಸತ್ತಿರುವವರ ಸಂಖ್ಯೆ ಎಷ್ಟು? (ಎಲ್ಲೆಲ್ಲಿ ಮತ್ತು ಯಾವ ಯಾವಾಗ ಎಂಬ ವಿವರಗಳನ್ನು ಒದಗಿಸುವುದು)

ಶ್ರೀ ಪಿ.ಆರ್.ಜಿ ಸಿಂಧ್ಯಾ (ಗೃಹ ಮಂತ್ರಿಗಳು) :

ಅ) -ಎರಡು-

1) ಬೆಂಗಳೂರು ನಗರದ ವಿಜಯನಗರದ ಪೋಲೀಸ್ ಠಾಣೆಯಲ್ಲಿ ದಿನಾಂಕ 1-2-1995 ರಂದು ಮಾರೇನ ಹಳ್ಳಿಯ ಶ್ರೀ ರಾಜಣ್ಣನವರನ್ನು ಚೀಟಿಯ ಹಣ ಸಂಬಂಧದಲ್ಲಿ ಠಾಣೆಗೆ 6 ಘಂಟೆಗೆ ಕರೆತಂದಿದ್ದು ಆತನು ಬೆಂಚಿನ ಮೇಲೆ ಕುಳಿತಿದ್ದಾಗ (ಲಾಕಪ್‌ನಲ್ಲಿ ಅಲ್ಲ) ಇದ್ದಕ್ಕಿದಂತೆ ಕೆಳಗೆ ಬಿದ್ದರು. ತಕ್ಷಣವೇ ಅವರನ್ನು ಶರಾಮತಿ ನರ್ಸಿಂಗ್ ಹೋಂಗೆ ಕಳುಹಿಸಿ ಕೊಡಲಾಯಿತು. ವೈದ್ಯಧಿಕಾರಿಗಳು ಸದರಿ ಶ್ರೀ ರಾಜಣ್ಣ ಮೃತ ಪಟ್ಟಿರುತ್ತಾರೆಂದು ತಿಳಿಸಿದ ಮೇರೆಗೆ ಪಿ.ಎಸ್.ಐ. ಶ್ರೀ ಮಹದೇವಯ್ಯನವರು ಸ್ವಪ್ರೇರಣೆಯಿಂದ ಯುಡಿಆರ್ ನಂ. 5/95 ಕಲಂ 174 ಸಿಆರ್‌ಪಿಸಿ ಪ್ರಕಾರಾ ಪ್ರಕರಣ ದಾಖಲು ಮಾಡಿಕೊಂಡು ನುಂದಿನ ಕ್ರಮ ಕೈಗೊಂಡಿರುತ್ತಾರೆ.

ಸರ್ಕಾರದ ನೀತಿಯಂತೆ ಪೋಲೀಸ್ ಠಾಣೆಗಳಲ್ಲಿ ಸತ್ತವರ ಬಗ್ಗೆ ಪ್ರಕರಣವನ್ನು ಸಿಒಡಿಗೆ ವಹಿಸಲಾಗಿದ್ದು ಸಿಒಡಿ ತನಿಖೆಯು ಇದೊಂದು ಹೃದ್ರೋಗದಿಂದ ಆಗಿರುವ ಮೃತ್ಯುವೆಂದು ತಿಳಿದು ಬಂದಿದ್ದು, ಈ ಮೊಕದ್ದಮೆಯನ್ನು ಮುಕ್ತಾಯ ಗೊಳಿಸಲಾಗಿದೆ.

2) ಬೆಂಗಳೂರು ನಗರದ ಫ್ರೇಜರ್ ಟೌನ್ ಪೋಲೀಸ್ ಠಾಣೆ ಯುಡಿಆರ್ 2/95 ಕಲಂ 174 ಸಿಆರ್‌ಪಿಸಿ ಪ್ರಕಾರ ದಾಖಲಾದ ಪ್ರಕರಣ.

ದಿನಾಂಕ 16-2-1995 ರಂದು ಮಧ್ಯಾಹ್ನ 12.40ರ ಸಮಯದಲ್ಲಿ ಹಚಿನ್ಸ್ ರಸ್ತೆಯಿಂದ ಪರೇರಾ ಎಂಬುವರು ದೂರವಾಣಿಯ ಮೂಲಕ ಹಚಿನ್ಸ್ ರಸ್ತೆ 5ನೇ ಕ್ರಾಸ್‌ನಲ್ಲಿ ಓರ್ವ ವ್ಯಕ್ತಿ ಗಲಾಟೆ ಮಾಡುತ್ತಿರುತ್ತಾನೆಂದು ತಿಳಿಸಿದ ಮೇರೆಗೆ ಪೋಲೀಸ್ ಠಾಣಾ ಸಿಬ್ಬಂದಿಯವರು ಸ್ಥಳಕ್ಕೆ ಧಾವಿಸಿ ಆ ವ್ಯಕ್ತಿಯನ್ನು (ಶ್ರೀ ಗೋಪಾಲಕೃಷ್ಣ) ಠಾಣೆಗೆ ವಿಚಾರಣೆಗೆ ಕರೆದು ತಂದರು. ಅದೇ ಸ್ಥಳದಿಂದ ಅಂದರೆ ಹಚಿನ್ಸ್ ರಸ್ತೆಯಿಂದ ಶ್ರೀ ರಾಮನಾಥ ಎಂಬುವರು ಠಾಣೆಗೆ ಬಂದು ತಮ್ಮ ಮನೆಯ ಕಿಟಕಿ ಗ್ಲಾಸುಗಳನ್ನು ಹೊಡೆದು ಹಾಕಿರುವುದಾಗಿಯು ಕೂಡಿತದ ಆಮಲಿನಲ್ಲಿ ಬುದ್ಧಿ ಭ್ರಮಣೆಯಾದವನಂತೆ ಹುಚ್ಚನ ಹಾಗೆ ವರ್ತಿಸುತ್ತಿದ್ದನೆಂದು ಆತನ್ನು ಬಾಯಿ ಮಾತಿನಲ್ಲಿಯೇ ಎಚ್ಚರಿಕೆ ನೀಡಿ ಕಳುಹಿಸಿಕೊಡುವಂತೆ ಕೋರಿರುತ್ತಾರೆ. ಅದೇ ರೀತಿ ಅಪರಾಧ ವಿಭಾಗದ ಪಿಎಸ್‌ಐ ಕ್ರೈಮ್-2 ಶ್ರೀ ನರೇಂದ್ರ ಬಾಬು ಬುದ್ಧಿವಾದ ಹೇಳಿ ಮಧ್ಯಾಹ್ನ 3-05 ಗಂಟೆಗೆ ಕಳುಹಿಸಿಕೊಟ್ಟಿರುತ್ತಾರೆ.